**All India Radio: Bangalore**
**National Bulletin In Kannada**
**21.07.2025  7.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

**ಮುಖ್ಯಾಂಶಗಳು**

1. ಇಂದಿನಿಂದ ಸಂಸತ್ತಿನ ಮುಂಗಾರು ಅಧಿವೇಶನ ಆರಂಭ : ಹಲವು ಪ್ರಮುಖ ವಿಧೇಯಕಗಳ ಮಂಡನೆ ನಿರೀಕ್ಷೆ
2. ಸಂವಾದಕ್ಕೆ ಒತ್ತು ನೀಡಿ ರಚನಾತ್ಮಕ ರಾಜಕೀಯದಲ್ಲಿ ತೊಡಗಿಸಿಕೊಳ್ಳುವಂತೆ ರಾಜಕೀಯ ಪಕ್ಷಗಳಿಗೆ ಕರೆ ನೀಡಿದ ಉಪರಾಷ್ಟ್ರಪತಿ
3. ವಿಶ್ವದಲ್ಲೇ ತ್ವರಿತ ಪಾವತಿ ವ್ಯವಸ್ಥೆಯಲ್ಲಿ ಭಾರತ ಮುಂಚೂಣಿಯಲ್ಲಿ; ಯುಪಿಐ ಬಗೆಗೆ ಐಎಂಎಫ್ ಪ್ರಶಂಸೆ
4. ಫಿಡೆ ಮಹಿಳಾ ಚೆಸ್ ವಿಶ್ವಕಪ್ : ಭಾರತ್ ಗ್ರ್ಯಾಂಡ್‌ಮಾಸ್ಟರ್ ಕೊನೆರೂ ಹಂಪಿ ಸೆಮಿಫೈನಲ್ ಪ್ರವೇಶ

<><><><>

**ಸಂಸತ್ತಿನ ಮುಂಗಾರು ಅಧಿವೇಶನ ಇಂದಿನಿಂದ ಆರಂಭವಾಗಲಿದೆ. ಆಗಸ್ಟ್ ೨೧ರವರೆಗೆ ಮುಂದುವರಿಯಲಿರುವ ಈ ಅಧಿವೇಶನದಲ್ಲಿ ಒಟ್ಟು ೨೧ ಸಭೆಗಳು ನಡೆಯಲಿವೆ. ಆಪರೇಷನ್ ಸಿಂಧೂರ್‌ನ ನಂತರ ನಡೆಯುತ್ತಿರುವ ಮೊದಲ  ಸಂಸತ್ ಅಧಿವೇಶನ ಇದಾಗಿದೆ. ಸಂಸತ್ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ಈ ಅಧಿವೇಶನದಲ್ಲಿ ಚರ್ಚೆಗೆ ಒಳಪಡುವ ಮಹತ್ವದ ವಿಧೇಯಕಗಳು ಹಾಗೂ ಇತರ ಪ್ರಮುಖ ವಿಷಯಗಳನ್ನು ಗುರುತಿಸಲಾಗಿದೆ ಎಂದು ತಿಳಿಸಿದ್ದಾರೆ.**

**ಈ ಕುರಿತು ಒಂದು ವರದಿ: ಅಭಯ್ (೪೫ ಸೆಕೆಂಡ್‌ಗಳು)**

**ಇಂದಿನಿಂದ ಆರಂಭವಾಗುತ್ತಿರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಒಟ್ಟು ೧೭ ವಿಧೇಯಕಗಳನ್ನು ಚರ್ಚೆಗಾಗಿ ಮಂಡಿಸುವ ಸಾಧ್ಯತೆ ಇದೆ. ಜನವಿಶ್ವಾಸ ತಿದ್ದುಪಡಿ ವಿಧೇಯಕ - ೨೦೨೫, ರಾಷ್ಟ್ರೀಯ ಕ್ರೀಡಾ ಆಡಳಿತ ವಿಧೇಯಕ - ೨೦೨೫ ಮತ್ತು ಮರ್ಚೆಂಟ್ ಶಿಪ್ಪಿಂಗ್ ವಿಧೇಯಕ - ೨೦೨೪ ಸೇರಿದಂತೆ ಹಲವು ಪ್ರಮುಖ ವಿಧೇಯಕಗಳು ಮಂಡನೆಯಾಗಲಿವೆ. ಬಿಲ್ಸ್**

ಆಫ್ ಲಾಡಿಂಗ್ ವಿಧೇಯಕ - ೨೦೨೪, ಸಾಗರದ ಮೂಲಕ ಸರಕು ಸಾಗಣೆ ವಿಧೇಯಕ - ೨೦೨೪, ಕರಾವಳಿ ಶಿಪ್ಪಿಂಗ್ ವಿಧೇಯಕ - ೨೦೨೪, ಭಾರತೀಯ ಬಂದರುಗಳ ವಿಧೇಯಕ - ೨೦೨೫, ಹಾಗೂ ಆದಾಯ ತೆರಿಗೆ ವಿಧೇಯಕ - ೨೦೨೫ ಅನ್ನು ಕೂಡ ಚರ್ಚೆಗೆ ತೆಗೆದುಕೊಳ್ಳುವ ನಿರೀಕ್ಷೆಯಿದೆ.

ಸಂಸತ್‌ನಲ್ಲಿ ಎತ್ತಲ್ಪಡುವ ಮಹತ್ವದ ವಿಷಯಗಳ ಕುರಿತು ಚರ್ಚೆ ನಡೆಸಲು ಸಿದ್ಧವಿದೆ ಎಂದು ಸರ್ಕಾರ ತಿಳಿಸಿದೆ. ೧೮ನೇ ಲೋಕಸಭೆಯ ಐದನೇ ಅಧಿವೇಶನದ ಮೊದಲ ದಿನವಾದ ಇಂದು, ಅಧಿವೇಶನದ ಆರಂಭಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಮಾಧ್ಯಮಗಳೊಂದಿಗೆ ಮಾಹಿತಿ ಹಂಚಿಕೊಳ್ಳಲಿದ್ದಾರೆ. ಇಂದು ಆರಂಭವಾಗಲಿರುವ ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಪೂರ್ವಭಾವಿಯಾಗಿ, ನಿನ್ನೆ ಉಭಯ ಸದನಗಳ ಸುಗಮ ಕಾರ್ಯನಿರ್ವಹಣೆಗೆ ಕೇಂದ್ರ ಸರ್ಕಾರ ಸರ್ವಪಕ್ಷ ಸಭೆಯನ್ನು ಕರೆದಿತ್ತು. ಲೋಕಸಭೆ ಮತ್ತು ರಾಜ್ಯಸಭೆಯನ್ನು ಪ್ರತಿನಿಧಿಸುವ ವಿವಿಧ ರಾಜಕೀಯ ಪಕ್ಷಗಳ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಕೇಂದ್ರ ಸಚಿವ ಕಿರಣ್ ರಿಜಿಜು, ಸಭೆ ರಚನಾತ್ಮಕವಾಗಿತ್ತು, ಸದನದ ನಾಯಕರು ತಮ್ಮ ಪಕ್ಷಗಳ ನಿಲುವು ಮತ್ತು ಅಧಿವೇಶನದಲ್ಲಿ ಚರ್ಚಿಸಲಾಗುವ ವಿಷಯಗಳನ್ನು ಮಂಡಿಸಿದರು. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆರಡು ಉತ್ತಮ ಸಮನ್ವಯದಿಂದ ಒಟ್ಟಾಗಿ ಕೆಲಸ ಮಾಡಬೇಕು ಎಂದು ಹೇಳಿದರು. ಆಪರೇಷನ್ ಸಿಂಧೂರ್ ನಂತರ ಪ್ರಮುಖ ವಿಷಯಗಳ ಕುರಿತು ಸಂಸತ್ತಿನಲ್ಲಿ ಮುಕ್ತ ಚರ್ಚೆ ನಡೆಸಲು ಸರ್ಕಾರ ಸಿದ್ಧವಿದೆ. ಭಾರತ-ಪಾಕಿಸ್ತಾನ ನಡುವೆ ಮಧ್ಯಸ್ತಿಕೆ ಕುರಿತ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗಳ ಕುರಿತು ಸರ್ಕಾರ ಸೂಕ್ತವಾಗಿ ಪ್ರತಿಕ್ರಿಯಿಸಲಿದೆ. ಜಸ್ಟೀಸ್ ವರ್ಮ ಮಹಾಭಿಯೋಗದ ಕುರಿತಂತೆ ಸರ್ಕಾರ ಎಲ್ಲಾ ಪಕ್ಷಗಳ ಅಭಿಪ್ರಾಯವನ್ನು ಪರಿಗಣಿಸಿ ಪ್ರಕ್ರಿಯೆಯನ್ನು ಮುಂದುವರೆಸಲಿದೆ ಎಂದು ಸಚಿವ ಕಿರಣ್ ರಿಜಿಜು ಹೇಳಿದರು.

ಧ್ವನಿ : ಕಿರಣ್ ರಿಜಿಜು (೨೪ ಸೆಕೆಂಡ್‌ಗಳು)

<><><><>

ಬಿಹಾರ ವಿಧಾನಮಂಡಲದ ಮುಂಗಾರು ಅಧಿವೇಶನ ಇಂದಿನಿಂದ ಆರಂಭವಾಗಲಿದೆ. ೫ ದಿನಗಳ ಅಧಿವೇಶನ ಇದೇ ೨೫ರವರೆಗೆ ನಡೆಯಲಿದೆ. ಇದೇ ವರ್ಷದ ಅಕ್ಟೋಬರ್, ನವೆಂಬರ್ ವೇಳೆಯಲ್ಲಿ

ವಿಧಾನಸಭೆ ಚುನಾವಣೆಗಳು ನಡೆಯಲಿರುವ ಹಿನ್ನೆಲೆ ಪ್ರಸಕ್ತ ರಾಜ್ಯ ವಿಧಾನಸಭೆಯ ಕೊನೆಯ ಅಧಿವೇಶನ ಇದಾಗಿದೆ. ಹಾಗೆಯೇ ಗೋವಾ ವಿಧಾನಸಭೆಯ ಮುಂಗಾರು ಅಧಿವೇಶನವು ಇಂದಿನಿಂದ ಆರಂಭವಾಗಿ ಆಗಸ್ಟ್ ೮ರವರೆಗೆ ನಡೆಯಲಿದೆ. ಈ ವೇಳೆ ೧೯ ವಿಧೇಯಕಗಳನ್ನು ಸರ್ಕಾರ ಮಂಡಿಸುವ ನಿರೀಕ್ಷೆಯಿದೆ.

<><><><>

ನವದೆಹಲಿಯಲ್ಲಿ ನೆನ್ನೆ ನಡೆದ ರಾಜ್ಯಸಭಾ ಇಂಟರ್ನ್‌ಶಿಪ್ ಕಾರ್ಯಕ್ರಮ (ಆರ್‌ಎಸ್‌ಐಪಿ) ಎಂಟನೇ ಬ್ಯಾಚ್‌ನಲ್ಲಿ ಭಾಗವಹಿಸುವವರ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಉಪ ರಾಷ್ಟ್ರಪತಿ ಜಗದೀಪ್ ಧಂಖರ್ ಅವರು, ಭಾರತವು ಐತಿಹಾಸಿಕವಾಗಿ ಸಂವಾದ, ಚರ್ಚೆ ಮತ್ತು ವಿಚಾರ ವಿನಿಮಯಕ್ಕೆ ಹೆಸರುವಾಸಿಯಾಗಿದೆ, ಅರ್ಥಪೂರ್ಣ ಚರ್ಚೆ ಮತ್ತು ಗಂಭೀರ ಚರ್ಚೆಗಳು ದೇಶವನ್ನು ಉನ್ನತ ಎತ್ತರಕ್ಕೆ ಕೊಂಡೊಯ್ಯುತ್ತವೆ ಎಂದು ಹೇಳಿದ ಅವರು, ಹಾಗೂ ರಾಜಕೀಯ ಪಕ್ಷಗಳು ರಚನಾತ್ಮಕ ರಾಜಕೀಯದಲ್ಲಿ ತೊಡಗಿಸಿಕೊಳ್ಳುವಂತೆ ಮನವಿ ಮಾಡಿದರು. ಪ್ರತಿಯೊಂದು ರಾಜಕೀಯ ಪಕ್ಷವು ರಾಷ್ಟ್ರೀಯ ಅಭಿವೃದ್ಧಿಯ ಕಡೆಗೆ ಬದ್ಧತೆಯನ್ನು ಹೊಂದಿದೆ ಮತ್ತು ಈ ಮನಸ್ಥಿತಿಯನ್ನು ಖಚಿತಪಡಿಸಿಕೊಳ್ಳುವುದು ಯುವಕರ ಕರ್ತವ್ಯವಾಗಿದೆ ಎಂದು ಅವರು ಹೇಳಿದರು.ರಾಜಕೀಯವು ಎಂದಿಗೂ ಏಕಮುಖವಾಗಿರಲು ಸಾಧ್ಯವಿಲ್ಲ, ವಿಭಿನ್ನ ರಾಜಕೀಯ ಚಿಂತನೆ ಪ್ರಕ್ರಿಯೆಗಳು ಇರುತ್ತವೆ. ರಾಜಕೀಯ ಎಂದರೆ ಒಂದೇ ಉದ್ದೇಶವನ್ನು ಸಾಧಿಸುವುದು ಆದರೆ ವಿಭಿನ್ನ ರೀತಿಯಲ್ಲಿ ಎಂಬುದನ್ನು ಎತ್ತಿ ತೋರಿಸುತ್ತದೆ ಹಾಗು ರಾಜಕೀಯ ತಾಪಮಾನವನ್ನು ತಗ್ಗಿಸಲು ದೇಶದ ಪ್ರತಿಯೊಬ್ಬರ ಪಾಲ್ಗೊಳ್ಳುವಿಕೆ ಅಗತ್ಯ ಎಂದು ಹೇಳಿದರು.

<><><><>

ಏಕೀಕೃತ ಪಾವತಿ ವ್ಯವಸ್ಥೆ - ಯುಪಿಐ ಈ ವರ್ಷ ಜೂನ್‌ನಲ್ಲಿ ಒಟ್ಟು ೨೪.೦೩ ಲಕ್ಷ ಕೋಟಿ ರೂಪಾಯಿ ಮೌಲ್ಯದ ೧೮.೩೯ ಬಿಲಿಯನ್ ವಹಿವಾಟುಗಳನ್ನು ದಾಖಲಿಸಿದ್ದು, ತ್ವರಿತ ಪಾವತಿಗಳ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಭಾರತ ಮುಂಚೂಣಿಯಲ್ಲಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ-ಐಎಂಎಫ್ ತಿಳಿಸಿದೆ.

ಈ ಕುರಿತು ಒಂದು ವರದಿ: ಅಭಯ್ (೧ ನಿಮಿಷ ೧೫ ಸೆಕೆಂಡ್‌ಗಳು)

ಬೆಳೆಯುತ್ತಿರುವ ರಿಟೈಲ್ ಡಿಜಿಟಲ್ ಪಾವತಿಗಳು: ಪರಸ್ಪರ ಕಾರ್ಯ ಸಾಧ್ಯತೆಯ ಮೌಲ್ಯ ಎಂಬ ಐಎಂಎಫ್ ವರದಿ ಈ ಕುರಿತು ತಿಳಿಸಿದ್ದು, ೨೦೧೬ರಲ್ಲಿ ಭಾರತೀಯ ರಾಷ್ಟ್ರೀಯ ಪಾವತಿ ನಿಗಮ - ಎನ್‌ಪಿಸಿಐ ಮೂಲಕ ಆರಂಭವಾದ ಯುಪಿಐ ವ್ಯವಸ್ಥೆಯು ಭಾರತದ ಪಾವತಿ ಪರಿಕಲ್ಪನೆಯಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತಂದಿದ್ದು, ಬಳಕೆದಾರರು ಒಂದೇ ಮೊಬೈಲ್ ಆಪ್ ಮೂಲಕ ಹಲವು ಬ್ಯಾಂಕ್ ಖಾತೆಗಳನ್ನು ಲಿಂಕ್ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಲಾಗಿದೆ. ಯುಪಿಐ ಪಾವತಿಗಳನ್ನು ಸುಲಭಗೊಳಿಸಿರುವಷ್ಟೇ ಅಲ್ಲದೆ, ಲಕ್ಷಾಂತರ ಸಣ್ಣ ಉದ್ಯಮಗಳಿಗೆ ಅಲ್ಪ ವೆಚ್ಚದಲ್ಲಿ ಡಿಜಿಟಲ್ ಪಾವತಿಗಳನ್ನು ಸ್ವೀಕರಿಸಲು ಅವಕಾಶ ನೀಡಿದೆ. ಪ್ರತಿ ತಿಂಗಳು ೧೮ ಶತಕೋಟಿಗೂ ಹೆಚ್ಚು ವಹಿವಾಟುಗಳನ್ನು ಯುಪಿಐ ಮೂಲಕ ನಿರ್ವಹಿಸಲಾಗುತ್ತಿದೆ. ಇದು ಭಾರತದ ಒಟ್ಟು ಡಿಜಿಟಲ್ ಪಾವತಿಗಳಲ್ಲಿ ಶೇಕಡ ೮೫ ರಷ್ಟನ್ನು ಹೊಂದಿದೆ. ಜೂನ್ ತಿಂಗಳಲ್ಲಿಯೇ ೧೮.೩೯ ಬಿಲಿಯನ್ ವ್ಯವಹಾರಗಳು ನಡೆದಿದ್ದು, ಇದು ಹಿಂದಿನ ವರ್ಷದ ಜೂನ್‌ಗಿಂತ ಶೇಕಡ ೩೨ ರಷ್ಟು ಹೆಚ್ಚಿನ ಪ್ರಮಾಣವಾಗಿದೆ. ೪೯೧ ದಶಲಕ್ಷ ಬಳಕೆದಾರರು, ೬೫ ದಶಲಕ್ಷ ವ್ಯಾಪಾರಸ್ಥರು ಹಾಗೂ ೬೭೫ ಬ್ಯಾಂಕುಗಳು ಈ ವೇದಿಕೆಗೆ ಜೋಡಿಸಲಾಗಿದೆ. ಯುಪಿಐ ವ್ಯವಸ್ಥೆಯ ವಿಸ್ತರಣೆ ನಗದು ಮತ್ತು ಕಾರ್ಡ್ ಆಧಾರಿತ ಪಾವತಿಗಳಿಂದ ಡಿಜಿಟಲ್ ಆರ್ಥಿಕತೆಯತ್ತ ಭಾರತವನ್ನು ಮುನ್ನಡೆಸಿದೆ. ಇದು ಜನ ಸಾಮಾನ್ಯರಿಂದ ಸಣ್ಣ ಉದ್ಯಮಗಳವರೆಗೆ ಸುರಕ್ಷಿತ ಪಾವತಿಯ ಮಾರ್ಗವನ್ನು ಸೃಷ್ಟಿಸಿದೆ.

<><><><>

ಕನ್ವರ್ ಯಾತ್ರ ಅಂತಿಮ ಹಂತ ತಲುಪುತ್ತಿದ್ದು, ಭಗವಾನ್ ಶಿವನಿಗೆ ಪವಿತ್ರ ಗಂಗಾಜಲವನ್ನು ಅರ್ಪಿಸುವ ನಿಟ್ಟಿನಲ್ಲಿ ಹರಿದ್ವಾರಕ್ಕೆ ಗಂಗಾ ಜಲವನ್ನು ಸಂಗ್ರಹಿಸಲು ದೊಡ್ಡ ಸಂಖ್ಯೆಯ ಭಕ್ತರ ಸಮೂಹ ಆಗಮಿಸುತ್ತಿದೆ. ಗಂಗಾ ಜಲ ಪಡೆದ ಬಳಿಕ ಹಿಂದಿರುಗುವ ದಾಕ್ ಕನ್ವರಿಯಾಗಳ ಸಂಖ್ಯೆ ದಿನೇ ದಿನೇ ಹೆಚ್ಚಳವಾಗುತ್ತಿದ್ದು, ಸಂಚಾರ ಪೊಲೀಸರು ಸಂಚಾರ ನಿರ್ವಹಣೆಗೆ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದ್ದಾರೆ. ನಗರ ರಸ್ತೆಗಳಿಂದ ಹರ್ಕಿಪೌರಿ ವರೆಗೆ ಸಂಪೂರ್ಣ ಪ್ರದೇಶ ಭಕ್ತ ಸಮೂಹದಿಂದ ತುಂಬಿದೆ. ಈವರೆಗೆ ೨.೫ ಕೋಟಿಗೂ ಅಧಿಕ ಕನ್ವರಿಯಾಗಳು ಪವಿತ್ರ ಗಂಗಾಜಲದೊಂದಿಗೆ ಮರಳಿದ್ದಾರೆ.

<><><><>

ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಗಳ ಅಡಿಯಲ್ಲಿ, ಜಮ್ಮುವಿನ ೧೯ ನೇ ಬ್ಯಾಚ್‌ನಲ್ಲಿ ೩೭೯೧ ಯಾತ್ರಿಕರ ಮತ್ತೊಂದು ತಂಡವು ಭಗವತಿ ನಗರ ಯಾತ್ರಿ ನಿವಾಸ್ ಮೂಲ ಶಿಬಿರದಿಂದ ಅಮರನಾಥ ಗುಹೆ

ದೇಗುಲಕ್ಕೆ ತೀರ್ಥಯಾತ್ರೆ ಮಾಡಲು ಕಾಶ್ಮೀರ ಕಣಿವೆಗೆ ಹೊರಟಿತು. ಯಾತ್ರಿಕರು ಇಂದು ಬೆಳಿಗ್ಗೆ ೧೪೮ ವಾಹನಗಳ ಬೆಂಗಾವಲು ವಾಹನದಲ್ಲಿ ಬೇಸ್ ಕ್ಯಾಂಪ್‌ನಿಂದ ಹೊರಟರು. ೧೨೦೮ ಯಾತ್ರಿಕರು ಬೆಳಿಗ್ಗೆ ೩:೩೩ ಕ್ಕೆ ಬಾಲ್ಟಾಲ್ ಬೇಸ್ ಕ್ಯಾಂಪ್‌ಗೆ ಮತ್ತು ೨೫೮೩ ಜನರು ಬೆಳಿಗ್ಗೆ ೪:೦೬ ಕ್ಕೆ ಪಹಲ್ಗಾಮ್ ಬೇಸ್ ಕ್ಯಾಂಪ್‌ಗೆ ಹೊರಟರು, ಅಲ್ಲಿಂದ ಅವರು ಪವಿತ್ರ ಗುಹೆಗೆ ತಮ್ಮ ಮುಂದಿನ ಪ್ರಯಾಣಕ್ಕಾಗಿ ತೆರಳಲಿದ್ದಾರೆ.

<><><><>

ಜಾರ್ಜಿಯಾದ ಬಟುಮಿಯಲ್ಲಿ ನಡೆಯುತ್ತಿರುವ ಫಿಡೆ ಮಹಿಳಾ ಚೆಸ್ ವಿಶ್ವಕಪ್‌ನಲ್ಲಿ ಭಾರತದ ಗ್ರಾಂಡ್‌ಮಾಸ್ಟರ್ ಕೊನೆರೂ ಹಂಪಿ ಸೆಮಿಫೈನಲ್ ಹಂತಕ್ಕೇರಿದ್ದಾರೆ. ಆ ಮೂಲಕ ಈ ಹಂತ ತಲುಪಿದ ಮೊದಲ ಭಾರತ ಮಹಿಳೆ ಎಂಬ ಹೆಗ್ಗಳಿಕೆ ಪಾತ್ರರಾಗಿದ್ದಾರೆ. ಕ್ವಾಟರ್ ಫೈನಲ್‌ನಲ್ಲಿ ಹಂಪಿ ಚೀನಾದ ಸಾಂಗ್ ಯುಕ್ಸಿನ್ ಅವರನ್ನು ಸೋಲಿಸಿದರು. ಅಂತಾರಾಷ್ಟ್ರೀಯ ಮಾಸ್ಟರ್ ದಿವ್ಯಾ ದೇಶ್‌ಮುಖ್ ಹಾಗೂ ಗ್ರಾಂಡ್ ಮಾಸ್ಟರ್ ಹರಿಕಾ ದ್ರೋಣವಲ್ಲಿ ನಿನ್ನೆ ನಡೆದ ೨ ಪಂದ್ಯಗಳಲ್ಲಿ ಸಮಬಲ ಸಾಧಿಸಿದ್ದು, ಇಂದು ನಡೆಯಲಿರುವ ಟೈಬ್ರೆಕರ್ ಪಂದ್ಯದಲ್ಲಿ ಸೆಮಿಫೈನಲ್ ಹಂತಕ್ಕೇರಲು ಸೆಣಸಾಟ ನಡೆಸಲಿದ್ದಾರೆ. ಈ ಪಂದ್ಯ ಭಾರತೀಯ ಕಾಲಮಾನ ಇಂದು ಸಂಜೆ ೪.೩೫ಕ್ಕೆ ಆರಂಭವಾಗಲಿದೆ. ಕ್ವಾಟರ್ ಫೈನಲ್ ಹಂತದಲ್ಲಿ ಕಣಕ್ಕಿಳಿದಿರುವ ಮತ್ತೋರ್ವ ಭಾರತೀಯ ಗ್ರಾಂಡ್ ಮಾಸ್ಟರ್ ವೈಶಾಲಿ ರಮೇಶ್‌ಬಾಬು ೩ನೇ ಶ್ರೇಯಾಂಕಿತ ಚೀನಾದ ಟ್ಯಾನ್‌ಝೊಂಗ್ಯಿ ವಿರುದ್ಧ ಸೋಲನುಭವಿಸಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>